ಪಿಡಬ್ಲೂ 03

ಪ್ರಮಾಣ ವಚನ ಭೋದಿಸಿದ ದಿನಾಂಕಃ 02-09-2022.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪುಟ್ಟಸ್ವಾಮಿ ನನ್ನ ಸ್ನೇಹಿತ ಎಂದರೆ ಮೂರೂ ಮಂದಿ ನನ್ನ ಸ್ನೇಹಿತರು ಎಂದು ನುಡಿಯುತ್ತಾರೆ . 1ನೇ ಆರೋಪಿ ಮತ್ತು ನನ್ನ ಮದ್ಯೆ 4 ವರ್ಷದ ಹಿಂದೆ ವೈಮನಸ್ಸು ಉಂಟಾಗಿ ನಾನು 1ನೇ ಆರೋಪಿಗೆ ನಿನಗೆ ಬುದ್ಧಿ ಕಲಿಸುತ್ತೇನೆ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಸುತ್ತಲದೆಲೆ ಬೋಜಪ್ಪಗೌಡರು ಗೊತ್ತು. ನಾನು ಸದರಿ ಬೋಜಪ್ಪಗೌಡರ ಮನೆಗೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದು ಆಗ 1ನೇ ಆರೋಪಿ ಮತ್ತು ನನ್ನ ಮದ್ಯೆ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಈ ಘಟನೆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಾನು ಸ್ಥಳಕ್ಕೆ ಹೋದಾಗ ಮಾಹಿತಿ ಸಂಗ್ರಹಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಘಟನೆ ಬಗ್ಗೆ ಪ್ರಾ.ಸಾ-1 ಮತ್ತು ಪ್ರಾ.ಸಾ-4 ಸದಾಶಿವರವರು ನನಗೆ ಮಾಹಿತಿ ನೀಡಿರುತ್ತಾರೆ. ಸದರಿಯವರು ಹೇಳಿದ ಮಾಹಿತಿಯ ಮೇಲೆ ನಾನು ಸಾಕ್ಷ್ಯವನ್ನು ಕೊಡುತ್ತಿದ್ದೇನೆ ಎಂದರೆ ಹೌದು. ಯಾವುದೇ ಘಟನೆ ನಡೆಯದಿದ್ದರೂ ಪ್ರಾಸಾ -1 ಮತ್ತು ಪ್ರಾ ಸಾ -4 ರವರು ನನ್ನ ಬಳಿ ಸುಳ್ಳಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿಃ15-03-2016 ಹರ್ದು ಚಾಸಾ-1 ರವರನ್ನು ನಾನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸದಾಶಿವ ರವರ ಪ್ರಚೋಧನೆ ಮೆರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ನನಗೆ ಪೋಲೀಸರು ಹೇಳಿರುತ್ತಾರೆ . ದಿಃ01-08-2018 ರಂದು ಪೋಲೀಸರು ನನಗೆ ಫೋನ್ ಮಾಡಿ ನನ್ನನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಘಟನೆ ಬಗ್ಗೆ ನನಗೆ ಏನೂ ಗೊತ್ತಿಲ್ಲ, ಪ್ರಾ,ಸಾ-1 ರವರನ್ನು ನೋಡಲು ಸಾಗರ ಆಸ್ಪತ್ರೆಗೆ ಹೋಗಿಲ್ಲ, ಅವರನ್ನು ಕರೆದುಕೊಂಡು ಶಿವಮೊಗ್ಗ ಆಸ್ಪತ್ರೆಗೂ ಹೋಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).